1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 497.

ಅರ್ಜೀದಾರ್ ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕು ಬೂದುಗುಟ್ಟೇಲಿದ್ದು ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನ ಹೆಂಡತಿ ನಾರಾಯಣಮ್ಮ, ಈಕೆವಗಳು ಕೃಷ್ಣಮ್ಮ ಸದರೀ ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನಿಗೆ ಬರತಕ್ಕ ಸಾಲದ ಬಾಬತು 3,000 ರೂಪಾಯಿ ಸಾಲವೆನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಕೊಡಿಸಬೇಕೆಂತ ವಗೈರೇ ಕೊಟ್ಟಿರುವ ಅರ್ಜಿ ವಿಮರ್ಕೀ ಬಗ್ಯೆ ಯಿದೇ ಇಸವಿ ಜುಲೈ 22ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ಯೀನಾದರೂ ಯಿದ್ದರೆ ತಿಳಿಸತಕ್ಕದ್ದಿದೆ.

ಬತಾರೀಖು 1ನೇ ಜುಲೈ 1887ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 24ನೇ ಜೂನ್ 1887.

ಕೋಲಾರ ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಈ ಕೆಳಗೆ ವಿವರಿಸೋಣಾದ ರಿಜಿಸ್ಟ್ರಾದ ಮತ್ತು ರಿಜಿಸ್ಟ್ರೇರ್ಷ ತಿರಸ್ಕರಿಸಲ್ಪಟ್ಟ 3 ತಂಸೂಕುಗಳು 2 ವರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವರು ವಾಪಸ್ ಕೇಳದೆ ಇರುವ ಕಾರಣ ನಿಂತಿರುತ್ತವೆ. ಸದರೀ ತಂಸೂಕುಗಳನ್ನು ಹಾಜರ್ಮಾಡಿದವರು ಅಥವಾ ವಾಪಸು ಪಡಿಯಲು ಅಧಿಕಾರ ಹೊಂದಿದವರು ಯಾ ತಂಸೂಕುಗಳಲ್ಲಿ ಬಾಧ್ಯತೆವುಳ್ಳವರು ಯಾರಾಗಲಿ ಭದ್ರಪಡಿಸಿದ ಬಗ್ಯೆ ರೂಲ್ಸು ಪ್ರಕಾರ ವಿಧಾಯಕವಾಗಿರುವ ಫೀಜು ಪಾವತಿಯಿಂದ ತಂಸೂಕುಗಳನ್ನು ಈ ತಾರೀಖು ಲಾಗಾಯತು 1 ತಿಂಗಳಲ್ಲಿ ಮೇಲ್ಕಂಡ ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ ಹಾಜರಾಗಿ ವಾಪಸ್ ಪಡಿಯಬಹುದು, ತಪ್ಪಿದರೆ ಅವುಗಳು ರಿಜಿಸ್ಟ್ರೇರ್ಷ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ರಿಜಿಸ್ಟ್ರಾ ಬುಕ್ಕಿನ ಇಸವಿ ಮತ್ತು ನಂಬರು.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ರಿಜಿಸ್ಟರ್ ಬೈಸ್ಟಾದ ತಾರೀಖು.	ರಿಜಿಸ್ಟ್ರಾದ ಅಥವಾ ರಿಜಿಸ್ಟ್ರೇರ್ಷ ತಿರಸ್ಕರಿಸಲ್ಪಟ್ಟ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಮ್ಮತ್ತು.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರು.				
1884—85ನೇ ಇಸವಿ ಬಗ್ಗೆ ಮೂಲ 2ನೇ ನಂಬರು ರಿಜಿಸ್ಟ್ರೇರ್ಷ ಬುಕ್ಕು ಬಾಬತು	ಬಂಗಳೂರು ಮಾಲೆ ಮಲ್ಲಪ್ಪಪೆಟ್ಟ ಮಾರು ಯಲೆವೀರಣ್ಣ ಪೆಟ್ಟ್ಯರು	ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ನಂದಬಳ್ಳಿ ಗ್ರಾಮದಲ್ಲಿ ಯಿರುವ ದೇಕಕುಲಕರಣಿ—1ನೇ ಲಕ್ಷ್ಮಿನಾರಣಪ್ಪ 2ನೇ ವೆಂಮಂಣ	1884ನೇ ಇಸವಿ ಫೆಬ್ರವರಿ ತಾರೀಖು 17	1884ನೇ ಇಸವಿ ನವೆಂಬರು ತಾರೀಖು 18	ರಿಜಿಸ್ಟ್ರೇರ್ಷ ನಂದಂಬಳ್ಳಿ ಗ್ರಾಮದ ಬಳಿಯ ತಿರಸ್ಕರಿಸಲ್ಪಟ್ಟ 1 ಖಂಡಿ ತರಿ, ಕಿರಿಸಂದ್ರದ ಜಮೀನು 1885ನೇ ಇಸವಿ ಮಾರ್ಚಿ 18 ಮೇರಿಗೆ	ಜಮೀನು ಸಾಲು 1ಕ್ಕೆ 16-1-0 ಕಾಯಂ ಕಂದಾಯಕ್ಕೆ ಕೊಟ್ಟಿರುವದಾಗಿ
ಡಿಟೋ 1885—86ನೇ ಇಸವಿ ಬಗ್ಗೆ 1ನೇ ನಂಬರು ಬುಕ್ಕಿನ 1885 86ನೇ ಇಸವಿ ನಂಬರು 171	ಮುಳಬಾಗಿಲ್ ತಾಲ್ಲೂಕು ಪಂಬರಹಳ್ಳಿಯಲ್ಲಿರುವ 1ನೇ ಶಾಪೂರು ಕೆಚ್ಚಪ್ಪಯ್ಯ 2ನೇ ಇವನ ತಮ್ಮ ಮುನಿಶಾಮಯ್ಯ	ಕೋಲಾರದ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟ ಗ್ರಾಮದಲ್ಲಿರುವ ಯಂಗಟರಡ್ಡಿ	1884ನೇ ಇಸವಿ ಡಿಸೆಂಬರು 13	1885ನೇ ಇಸವಿ ಜನವರಿ 10	ರಿಜಿಸ್ಟ್ರೇರ್ಷ ಮಣಿಗಟ್ಟ ಗ್ರಾಮಕ್ಕೆ ಕೇರಿದ ತಿರಸ್ಕರಿಸಲ್ಪಟ್ಟ ಕಾಯಂಗುತ್ತಾ ಕೃಷ್ಣರಾಜಪುರದ್ದು 1885ನೇ ಇಸವಿ ಆಗಸ್ಟ್ 13	ಪೇಜಿರಾಳ ಗ್ರಾಮದಲ್ಲಿ ಬರಿಕೆ ಕೊಟ್ಟವರ 8ರಲ್ಲಿ ವಂದು ಭಾಗ 55 ರೂಪಾಯಿಗಳಿಗೆ ಕ್ರಯವಾಡಿ ಯಿರುವದಾಗಿ
1ನೇ ನಂಬರು ಬುಕ್ಕಿನ 1885 86ನೇ ಇಸವಿ ನಂಬರು 171	ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟ ಗ್ರಾಮದಲ್ಲಿ ಯಿರುವ ವೆಂಕಪ್ಪನ ಮಗ ಕೃಷ್ಣಪ್ಪ	ಡಿಟೋ ಗ್ರಾಮದಲ್ಲಿ ಯಿರುವ ಕೊಂಡಾರಡ್ಡಿ	1885ನೇ ಇಸವಿ ಜನವರಿ 8	1885ನೇ ಇಸವಿ ಜನವರಿ 8	ರಿಜಿಸ್ಟ್ರಾದ್ದು 1885ನೇ ಇಸವಿ ಜನವರಿ 8	ಮಣಿಗಟ್ಟ ಗ್ರಾಮದಲ್ಲಿ ಬರಕೆ ಕೊಟ್ಟವನಿಗೆ ಯಿರುವ 9ನೇ ನಂಬರು ಖುಷ್ಕಿ ಂಂllಕ್ಕೆ ಕಂದಾಯ 6—6—0 ವುಳ್ಳ ಜಮೀನು 20 ರೂಪಾಯಿಗಳಿಗೆ ಕ್ರಯಮಾಡಿ ಯಿರುವದಾಗಿ

ಕೃಷ್ಣಯ್ಯಂಗಾರ್, ಸಾರ್ ರಿಜಿಸ್ಟ್ರಾರ್.